ಅ) ಈಗಾಗಲೇ ಅದರ ಮಾಲೀಕರು ಅದು ಲಾಭದಾಯಕವಾಗಿಲ್ಲವೆಂದು ಅದನ್ನು ಮುಚ್ಚಲು ಕ್ರಮ ಕೈಗೊಂಡಿರುವುದು ನಿಜವೆ.

ಇ) ಆ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿರುವ ಸುಮಾರು ೨೫೦ ಕುಟುಂಬಗಳು ನಿರ್ಗತಿಕ ರಾಗುವುದನ್ನು ತಡೆಗಟ್ಟಲು ಸರ್ಕಾರದವರು ತ್ವರಿತವಾಗಿ ಕ್ರಮ ಕೈಗೊಳ್ಳುವರೆ?

ಶ್ರೀ ಜೆ. ಹೆಚ್. ಪಟೇಲ್, (ಶೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಸಚಿವರು).—

ಅ) ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಆ) ಇಲ್ಲ.

ಇ) ಕೈಗಾರಿಕಾ ಮತ್ತು ಆರ್ಥಿಕ ಪುನರ್ ರಚನಾ ಮಂಡಲಿಯು (ಬಿ. ಐ. ಎಫ್. ಆರ್) ಕಾರ್ಖಾನೆಯನ್ನು ರೋಗಗ್ರಸ್ಥವೆಂದು ಸಾರಿದಲ್ಲಿ, ಸರ್ಕಾರದ ನೀತಿಯ ಪ್ರಕಾರ ಅದನ್ನು ಪುನಶ್ಚೇತನ ಗೊಳಿಸಲು ಸಾಧ್ಯವಿರುವ ಕ್ರಮಗಳನ್ನು ಕೈಗೊಳ್ಳಲಾಗುವುದು.

## ದರಖಾಸ್ತು ಮಂಜೂರಾತಿ ಮತ್ತು ಕೃಷಿ ಭೂಮಿ ವಿತರಣೆ ಬಗ್ಗೆ

೧೪೬೪. ಶ್ರೀ ಕೆ. ಕುಶಾಲ (ಸುಳ್ಯ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸುಳ್ಯ ತಾಲ್ಲೂಕಿನಲ್ಲಿ ದರಖಾಸ್ತು ಮಂಜೂರಾತಿ ಆದಂತೆ, ಸದ್ರಿ ದರಖಾಸ್ತು ಸ್ಥಳಗಳಲ್ಲಿ ಅರಣ್ಯ ಇಲಾಖೆ ಮರಗಳು ಇರುವ ಪ್ರಕರಣಗಳೆಷ್ಟು ಹಾಗೂ ದರಖಾಸ್ತು ಜಮೀನಿನ ವಿಸ್ತೀರ್ಣವೆಷ್ಟು

ಆ) ಸದರಿ ದರಖಾಸ್ತುದಾರರಿಗೆ ದರಖಾಸ್ತು ಮಂಜೂರಾತಿಯಂತೆ ಡಿ. ನೋಟೀಸು ಕೊಟ್ಟು ಕೃಷಿಗೆ ಭೂಮಿಯನ್ನು ಉಪಯೋಗಿಸಲು ಅಸಾಧ್ಯವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಇ) ಸದ್ರಿ ಇಲಾಖೆಯವರು ದರಖಾಸ್ತು ಮಂಜೂರಾದ ಸ್ಥಳಗಳಿಂದ ಮರಗಳನ್ನು ಈ ತನಕ ಕಡಿದು ಸಾಗಿಸಿದ ಪ್ರಕರಣಗಳೆಷ್ಟು, ಇನ್ನು ಕಡಿಮೆ ಸಾಗಿಸಲು ಉಳಿದಿರುವ ಪ್ರಕರಣಗಳೆಷ್ಟು ಈ ಬಾಕಿಯ ಕುರಿತು, ಕೂಡಲೇ ಮರಗಳನ್ನು ಕಡಿದು ಸಾಗಿಸಿ, ಕೃಷಿಗೆ ಭೂಮಿಯನ್ನು ಬಡವರಿಗೆ ಬಿಟ್ಟು ಕೊಡಲು ಇಲಾಖೆಯಿಂದ ಕ್ರಮ ಕೈಕೊಳ್ಳುವುದೆ?

ಶ್ರೀ ಜಿ. ಎಸ್. ಬಾಗಲಕೋಟೆ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ದರಖಾಸ್ತು ಮಂಜೂರಾತಿ ಆದ ಸ್ಥಳಗಳಲ್ಲಿ ಅರಣ್ಯ ಇಲಾಖೆ ಮರಗಳು ಇರುವ ಪ್ರಕರಣಗಳು ೬೨೪. ಜಮೀನಿನ ವಿಸ್ತೀರ್ಣ ವಿವರ ಈ ಇಲಾಖೆಯಲ್ಲಿ ಇರುವುದಿಲ್ಲ.

ಆ) ಬಂದಿದೆ.

ಇ) ೧ ಈ ತನಕ ಮರಗಳನ್ನು ಕಡಿದು ಸಾಗಿಸಿದ ಪ್ರಕರಣ ೪೩೨,
೨ ಇನ್ನು ಕಡಿದು ಸಾಗಿಸಲು ಉಳಿದಿರುವ ಪ್ರಕರಣ ೪೯೨.
೩ ಕ್ರಮ ಕೈಗೊಳ್ಳಲಾಗುವುದು.

## ರೇಷ್ಮೆ ಅಭಿವೃದ್ಧಿ

೧೪೬೫. ಶ್ರೀ ಪಿ. ಎಂ. ಚಿಕ್ಕಬೋರಯ್ಯ (ಚಾಮರಾಜ).—ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ರೇಷ್ಮೆ ಶಾಖೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ರೇಷ್ಮೆ ಬೆಳೆಯುತ್ತಿರುವ ಒಟ್ಟು ಭೂಮಿಯ ವಿಸ್ತೀರ್ಣವೆಷ್ಟು

ಆ) ರೇಷ್ಮೆ ಅಭಿವೃದ್ಧಿಗಾಗಿ ವಿಶ್ವಬ್ಯಾಂಕಿನಿಂದ ಎಷ್ಟು ನೆರವು ಕೇಳಲಾಗಿದೆ ಹಾಗೂ ಇದು ವರೆಗೂ ಎಷ್ಟು ನೆರವು ದೊರಕಿದೆ.